**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 21/2023 ಸಿ.ಡಬ್ಲ್ಯೂ –01 ಪಿ.ಡಬ್ಲ್ಯೂ -01

| | | |
|---|---|---|
| ಹೆಸರು | ಃ | ನಾಗರಾಜ |
| ತಂದೆಃ ಗಂಡ | ಃ | ದಿನೇಶ ಶೆಟ್ಟಿ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | : | ವ್ಯಾಪಾರಿ |
| ವಾಸಸ್ಥಳ | ಃ | ಆಳಂದ |

ದಿನಾಂಕಃ 18.09.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಚಾಸಾ 2 ರಿಂದ 7, 10 ಮತ್ತು 11 ಪರಿಚಯ. ಚಾಸಾ 8 ನನ್ನ ತಂದೆ.

ದಿಃ 07-11-2021 ರಂದು ಕೃಷ್ಣಾ ಲಾಡ್ಜನಲ್ಲಿ ನನ್ನ ಪ್ರತ್ಯೇಕ ಕೋಣೆಯಿದ್ದು ಅದರಲ್ಲಿ ನಾನು ಎರಡು ಬಂಗಾರದ ಉಂಗುರ, ಒಂದು ಬಂಗಾರದ ಚೈನು, ನಾಲ್ಕು ಬಂಗಾರದ ನಾಣ್ಯಗಳು, ಒಂದು ರೆಡೊ ವಾಚ, ನನ್ನ ತಾಯಿಯ ಬಂಗಾರದ ಮಾಂಗಲ್ಯ ಸರ, ಎರಡು ಬಂಗಾರದ ಬಳೆಗಳು, ಒಂದು ಜೊತೆ ಬಂಗಾರದ ಕಿವಿ ಓಲೆ, ಒಂದು ಬಂಗಾರದ ಖಡಾ, ರೂ. 1 ಲಕ್ಷ ನಗದು ಹಣವನ್ನು ಇಟ್ಟು ಉಡುಪಿಗೆ ಹೋಗಿದ್ದೇ, ದಿಃ 26-11-2021 ರಂದು ನಾನು ಮರಳಿ ಬಂದಾಗ ನನ್ನ ಕೋಣೆಯ ಬಾಗಿಲು ಮುರಿದಿತ್ತು ಮತ್ತು ಬಂಗಾರದ ಎಲ್ಲಾ ವಸ್ತುಗಳು ಮತ್ತು ನಗದು ಹಣ ಕಾಣೆಯಾಗಿತ್ತು, ಎಲ್ಲಾ ವಸ್ತುಗಳು ಚಲ್ಲಾಪಿಲ್ಲಿ ಆಗಿತ್ತು. ನಂತರ ನಾನು ಪೋಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ನಂತರ ಪೋಲಿಸರು ಪಂಚನಾಮೆ ಮಾಡಿರುತ್ತಾರೆ. ನಂತರ ಸ್ವಲ್ಪ ದಿನಗಳ ಬಳಿಕ ಪೋಲಿಸರು ನನಗೆ ಆರೋಪಿ ಸಿಕ್ಕ ಬಗ್ಗೆ ಮಾಹಿತಿ ನೀಡಿ ನನ್ನನ್ನು ಠಾಣೆಗೆ ಕರೆದಿರುತ್ತಾರೆ. ಠಾಣೆಗೆ ಹೋದಾಗ ಅಲ್ಲಿ ಆರೋಪಿ ಇದ್ದನ್ನು, ಮತ್ತು ನನ್ನ ಚಿನ್ನದ ಆಭರಣಗಳನ್ನು ಪೋಲಿಸರು ತೋರಿಸಿರುತ್ತಾರೆ. ನಂತರ ನಾನು ನ್ಯಾಯಾಲಯದ ಮೂಲಕ ಪೋಲಿಸರಿಂದ ಚಿನ್ನವನ್ನು ಪಡೆದುಕೊಂಡಿರುತ್ತೇನೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ. 1 ಅಂತಾ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 1 ಎ ಅಂತಾ ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆ ಸಮಯಾವಕಾಶ ಕೋರಿದ್ದರಿಂದ ಆಲಿಸಿ ನೀಡಲಾಯತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ